# PAPER-II
# KANNADA

**Signature and Name of Invigilator**

1. (Signature) __________________________
   (Name) ____________________________
2. (Signature) __________________________
   (Name) ____________________________

| J | A | 0 | 2 | 1 | 1 | 7 |
|---|---|---|---|---|---|---|

OMR Sheet No. : ..............................................
(To be filled by the Candidate)

Roll No. | | | | | | | | |
(In figures as per admission card)

Roll No.________________________________
(In words)

Time : 1 ¼ hours] [Maximum Marks : **100**

Number of Pages in this Booklet : **12** Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the Test Booklet Number should be entered on the OMR Sheet and the OMR Sheet Number should be entered on this Test Booklet.
   (iv) The test booklet no. and OMR sheet no. should be same. In case of discrepancy in the number, the candidate should immediately report the matter to the invigilator for replacement of the Test Booklet / OMR Sheet.
4. Each item has four alternative responses marked (1), (2), (3) and (4). You have to darken the circle as indicated below on the correct response against each item.
   **Example :** ① ② ● ④
   where (3) is the correct response.
5. Your responses to the items are to be indicated in the **OMR Sheet given inside the Booklet only.** If you mark your response at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means, such as change of response by scratching or using white fluid, you will render yourself liable to disqualification.
9. You have to return the Original OMR Sheet to the invigilators at the end of the examination compulsorily and must not carry it with you outside the Examination Hall. You are, however, allowed to carry original question booklet on conclusion of examination.
10. **Use only Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए पुस्तिका पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद प्रश्न-पुस्तिका का नंबर OMR पत्रक पर अंकित करें और OMR पत्रक का नंबर इस प्रश्न-पुस्तिका पर अंकित कर दें ।
   (iv) प्रश्न पुस्तिका नं. और OMR पत्रक नं. समान होने चाहिए । यदि नंबर भिन्न हों, तो परीक्षार्थी प्रश्न-पुस्तिका / OMR पत्रक बदलने के लिए निरीक्षक को तुरंत सूचित करें ।
4. प्रत्येक प्रश्न के लिए चार उत्तर विकल्प (1), (2), (3) तथा (4) दिये गये हैं । आपको सही उत्तर के वृत्त को पेन से भरकर काला करना है जैसा कि नीचे दिखाया गया है :
   **उदाहरण :** ① ② ● ④
   जबकि (3) सही उत्तर है ।
5. प्रश्नों के उत्तर **केवल प्रश्न पुस्तिका के अन्दर दिये गये OMR पत्रक पर ही** अंकित करने हैं । यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें । हालांकि आप परीक्षा समाप्ति पर मूल प्रश्न-पुस्तिका अपने साथ ले जा सकते हैं ।
10. **काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई नकारात्मक अंक नहीं हैं ।**



www.examrace.com

## KANNADA
## Paper – II

**ಸೂಚನೆ :** ಈ ಪತ್ರಿಕೆಯಲ್ಲಿ ಐವತ್ತು **(50)** ವಸ್ತುನಿಷ್ಠ ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ ಎರಡು **(2)** ಅಂಕಗಳಿರುತ್ತವೆ. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

**ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :**

**1.** 'ಕುರುಮ್ಬಿಡಿ' ಶಬ್ದ ಪ್ರಯೋಗವಿರುವ ಶಾಸನ :

(1) ಬಾದಾಮಿ (2) ಶ್ರವಣ ಬೆಳಗೊಳ

(3) ಹಲ್ಮಿಡಿ (4) ತಮಟಕಲ್ಲು

**2.** 'ಅತಿ ತುಂಗಾಕೃತಿಯಾದೊಡಾಗದದರೊಳ್ ಸೌಂದರ್ಯಮುಮೌಂನತ್ಯಮುಂ' ಎಂಬ ವಾಕ್ಯವಿಲ್ಲಿದೆ :

(1) ಆದಿಪುರಾಣ (2) ಬೊಪ್ಪಣನ ಗೊಮ್ಮಟ ಸ್ತುತಿ

(3) ಭರತೇಶ ವೈಭವ (4) ಅನಂತನಾಥ ಪುರಾಣ

**3.** 'ತರಣಿ ತೆಗೆದುದು ತಾವರೆಯ ಬಾಗಿಲಿನ ಬೀಯಗವ' ಎಂಬ ವಾಕ್ಯವಿರುವ ಕಾವ್ಯ :

(1) ಜೈಮಿನಿ ಭಾರತ (2) ತೊರವೆ ರಾಮಾಯಣ

(3) ಕುಮಾರವ್ಯಾಸ ಭಾರತ (4) ಕುಮಾರ ರಾಮನ ಸಾಂಗತ್ಯ

**4.** 'ಹಡೆ ವೆಂಕಟ' ಪಾತ್ರವು ಬರುವ ಕಥೆ :

(1) ತೇಜಸ್ವಿಯವರ 'ತಬರನ ಕಥೆ' (2) ಚಿತ್ತಾಲರ 'ಕಥೆಯಾದಳು ಹುಡುಗಿ'

(3) ದೇವನೂರರ 'ಅಮಾಸ' (4) ಅನಂತಮೂರ್ತಿಯವರ 'ಸೂರ್ಯನ ಕುದುರೆ'

**5.** 'ಬಾವಿಯೊಳಗೆ ಕೊಳೆವ ನೀರು ; ಮೇಲಕ್ಕಾವಿ
ಆಕಾಶದುದ್ದಕೂ ಅದರ ಕಾರಣ ಬೀದಿ ?'
ಈ ಸಾಲುಗಳು ಈ ಕವನದಲ್ಲಿವೆ :

(1) ಬರಿಗೊಡಗಳಿಗೆ ಸಮಾಧಾನ (2) ಭೂತ

(3) ಗೊಬ್ಬರ (4) ಮಬ್ಬಿನಿಂದ ಮಬ್ಬಿಗೆ

**6.** ಲಂಕೇಶ್ ಅನುವಾದಿಸಿದ ಬೋದಿಲೇರ್ ನ ಕೃತಿ :

(1) ದೊರೆ ಈಡಿಪಸ್ (2) ಪಾಪದ ಹೂಗಳು

(3) ಬಿರುಕು (4) ಅಕ್ಕ

**7.** ಗಳಗನಾಥರು ರಚಿಸಿದ ಮೊದಲ ಕಾದಂಬರಿ :

(1) ಪದ್ಮ ನಯನೆ (2) ವಾಗ್ದೇವಿ

(3) ಇಂದಿರೆ (4) ಇಂದಿರಾಬಾಯಿ



www.examrace.com

8. ಬ್ರೆಕ್ಟನ ಪ್ರಸಿದ್ಧ ನಾಟಕ :
(1) ಕಕೇಶಿಯನ್ ಚಾಕ್ ಸರ್ಕಲ್ (2) ಮರ್ಡರ್ ಇನ್ ಕೆಥೆಡ್ರಲ್
(3) ಅಜಾಕ್ಸ್ (4) ಕ್ರಾಸ್ ಪರ್ಪಸ್

9. ಬಂಡಾಯ ವಿಮರ್ಶೆಗೆ ತಾತ್ವಿಕ ನೆಲೆಗಟ್ಟು ರೂಪಿಸಿದವರು :
(1) ಬಿ.ಟಿ. ಲಲಿತಾ ನಾಯಕ್ (2) ಬರಗೂರು ರಾಮಚಂದ್ರಪ್ಪ
(3) ಮ.ನ. ಜವರಯ್ಯ (4) ಜಿ.ಎಸ್. ಸಿದ್ಧಲಿಂಗಯ್ಯ

10. 'ಪ್ರಿನ್ಸಿಪಲ್ಸ್ ಆಫ್ ಲಿಟರರಿ ಕ್ರಿಟಿಸಿಸಂ' ಕೃತಿಯನ್ನು ಬರೆದವರು
(1) ಐ.ಎ. ರಿಚರ್ಡ್ಸ್ (2) ಎಜ್ರಾ ಪೌಂಡ್
(3) ಟಿ.ಎಸ್. ಎಲ್ಯಟ್ (4) ಮ್ಯಾಥ್ಯೂ ಅರ್ನಾಲ್ಡ್

11. ಇದು ಕೀರ್ತಿನಾಥ ಕುರ್ತಕೋಟಿಯವರ ಒಂದು ವಿಮರ್ಶಾ ಕೃತಿ :
(1) ನವ್ಯ ವಿಮರ್ಶೆ (2) ನೂರು ಮರ ನೂರು ಸ್ವರ
(3) ಅಮೃತ ಮತ್ತು ಗರುಡ (4) ಸಮಕಾಲೀನ

12. ಕನ್ನಡ ಭಾಷೆಯ ಪ್ರಾಚೀನತೆಯನ್ನು ಹೆಚ್ಚು ಹಿಂದಕ್ಕೆ ಕೊಂಡೊಯ್ಯುವಲ್ಲಿ ಇದು ಗಮನಾರ್ಹ ದಾಖಲೆಗಳನ್ನು ಒದಗಿಸುತ್ತದೆ :
(1) ಸೈಗೊಟ್ಟ ಶಿವಮಾರನ ಗಜಾಷ್ಟಕ
(2) ಗಾಥಾ ಸಪ್ತಶತಿ
(3) ಹಲ್ಮಿಡಿ ಶಾಸನ
(4) ಟಾಲೆಮಿ ಮಾಡಿದ ಪ್ರಾಚೀನ ಭಾರತದ ಸ್ಥಳಗಳ ಉಲ್ಲೇಖ

13. ಇವು ಪೂರ್ವದ ಹಳಗನ್ನಡದ ನಾಮವಿಭಕ್ತಿ ಪ್ರತ್ಯಯಗಳು :
(1) ಅನು, ಒಳ್ (2) ಅನ್, ಅರ್
(3) ಆರ್, ಒರ್ (4) ಆನ್, ಉಳ್

14. ಇವು ಅರಬ್ಬಿ ಭಾಷೆಯಿಂದ ಕನ್ನಡ ಭಾಷೆಗೆ ಬಂದ ಪದಗಳು :
(1) ದಾವೆ, ರೊಕ್ಕ (2) ಜಮೀನು, ವಕೀಲ
(3) ಬೇಸಗೆ, ಗಂಟು (4) ಜೇವಣಿ, ದುಗುಣ

15. ಇವುಗಳಲ್ಲಿ ಉತ್ತರಪದಾರ್ಥ ಪ್ರಧಾನವಾದ ಸಮಾಸ ಪದ :
(1) ಗಿಡಮರಬಳ್ಳಿಗಳು (2) ಮುಂದಲೆ
(3) ಮುಕ್ಕಣ್ಣ (4) ಅರಮನೆ


www.examrace.com

16. ‘ರೀತಿರಾತ್ಮಾಕಾವ್ಯಸ್ಯ’ ಎಂಬ ಸೂತ್ರವನ್ನು ಹೇಳಿದವರು :

(1) ದಂಡಿ (2) ವಾಮನ

(3) ಭಾಮಹ (4) ಕುಂತಕ

17. ಅರಿಸ್ಟಾಟಲ್ ನ ‘ಅನುಕರಣೆ’ ಗೆ ಸಮೀಪವಾದ ಭಾರತೀಯ ಕಾವ್ಯಮೀಮಾಂಸೆಯ ‘ಅವಸ್ಥಾನುಕೃತಿರ್ನಾಟ್ಯಂ’ ಸೂತ್ರದ ರಚನೆಕಾರ :

(1) ಧನಂಜಯ (2) ಭರತ

(3) ಹೇಮಚಂದ್ರ (4) ಅಭಿನವಗುಪ್ತ

18. ಗ್ರೀಕ್ ನಾಟಕದ ‘ಟ್ರಾಜಿಡಿ’ ಪ್ರಬೇಧಕ್ಕೆ ಸಾರ್ವತ್ರಿಕವಾಗಿ ಒಪ್ಪಿಗೆಯಾಗಿರುವ ಪಾರಿಭಾಷಿಕ ಪದ :

(1) ದುಃಖಾಂತ ನಾಟಕ (2) ಶೋಕ ನಾಟಕ

(3) ಅವಿದ್ಧ ನಾಟಕ (4) ದುರಂತ ನಾಟಕ

19. ಆಧುನಿಕ ಪಾಶ್ಚಾತ್ಯ ಕಾವ್ಯ ಮೀಮಾಂಸೆಯಲ್ಲಿ ‘ರೂಪ’ ಮತ್ತು ‘ವಸ್ತು’ ಗಳು :

(1) ಅಭಿನ್ನವಾದವು (2) ವಸ್ತು ರೂಪದಲ್ಲಿ ಅಂತರ್ಗತ

(3) ರೂಪ ವಸ್ತುವಿನಲ್ಲಿ ಅಂತರ್ಗತ (4) ಭಿನ್ನವಾದವು

20. ‘ಅಭಿವ್ಯಕ್ತಿವಾದ’ ದ ಪ್ರತಿಪಾದಕ :

(1) ಪಿಕಾಸೋ (2) ಕ್ರೋಚೆ

(3) ಎಜ್ರಾ ಪೌಂಡ್ (4) ಇಲಿಯಟ್

21. ಇವು ಪೂರ್ವದ ಹಳಗನ್ನಡದ ಲಕ್ಷಣಗಳುಳ್ಳ ಶಾಸನಗಳು :

A. ಹಲ್ಮಿಡಿ ಶಾಸನ B. ಬುಕ್ಕನ ಶಾಸನ

C. ಗಂಗಾಧರಂ ಶಾಸನ D. ತಮ್ಮಟಕಲ್ಲು ಶಾಸನ

ಇವುಗಳಲ್ಲಿ ಸರಿಯಾದ ಉತ್ತರ :

(1) A ಮತ್ತು D (2) B ಮತ್ತು C

(3) C ಮತ್ತು D (4) D ಮತ್ತು B

22. ಈ ಕವಿಗಳು ಚಿಕ್ಕದೇವರಾಜನ ಕಾಲದಲ್ಲಿ ಜೀವಿಸಿದ್ದರು :

A. ನರಹರಿ B. ಷಡಕ್ಷರ

C. ಕುಮಾರವ್ಯಾಸ D. ಹೊನ್ನಮ್ಮ

ಇವುಗಳಲ್ಲಿ ಸರಿಯಾದ ಉತ್ತರ :

(1) B ಮತ್ತು D (2) A ಮತ್ತು C

(3) D ಮತ್ತು A (4) C ಮತ್ತು B



www.examrace.com

23. ಇವು ಮಾಸ್ತಿಯವರ ನಾಟಕಗಳು :

A. ಅನಾರ್ಕಳಿ ಮತ್ತು ಕಾಕನಕೋಟೆ

B. ಕನಕಣ್ಣ ಮತ್ತು ತಾಳಿಕೋಟೆ

C. ಸಾವಿತ್ರಿ ಮತ್ತು ಕಲ್ಮಾಡಿಯ ಕೋಣ

D. ಮಂಜುಳ ಮತ್ತು ಗೌಡರ ಮಲ್ಲಿ

ಇವುಗಳಲ್ಲಿ ಸರಿಯಾದ ಉತ್ತರ :

(1) A ಮತ್ತು B (2) B ಮತ್ತು C

(3) A ಮತ್ತು D (4) C ಮತ್ತು D

24. ಇವು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕಾದಂಬರಿಗಳು :

A. ಚೋಮನ ದುಡಿ

B. ಬಂಡಾಯ

C. ಮಹಾಕ್ಷತ್ರಿಯ

D. ಸಂಸ್ಕಾರ

ಇವುಗಳಲ್ಲಿ ಸರಿಯಾದ ಉತ್ತರ :

(1) A ಮತ್ತು C (2) B ಮತ್ತು C

(3) A ಮತ್ತು D (4) C ಮತ್ತು D

25. ಇವರು ಮಾರ್ಕ್ಸ್‌ವಾದಿ ವಿಮರ್ಶೆಯ ಪ್ರಮುಖ ಚಿಂತಕರು :

A. ಎಫ್. ಆರ್. ಲೀವಿಸ್

B. ಎಡ್ವರ್ಡ್ ಸೈದ್

C. ಲ್ಯೂಸಿಯನ್ ಗೋಲ್ಡ್‌ಮನ್

D. ರೇಮಂಡ್ ವಿಲಿಯಮ್ಸ್

ಇವುಗಳಲ್ಲಿ ಸರಿಯಾದ ಉತ್ತರ :

(1) A ಮತ್ತು B (2) D ಮತ್ತು B

(3) C ಮತ್ತು D (4) A ಮತ್ತು D

26. ಚಾರಿತ್ರಿಕ ವಿಮರ್ಶೆಯನ್ನು ಪ್ರತಿಪಾದಿಸಿದ ಇಬ್ಬರು ವಿಮರ್ಶಕರು :

A. ಆರ್. ಎಸ್. ಕ್ರೇನ್

B. ಐ. ಎ. ರಿಚರ್ಡ್ಸ್

C. ರಾಲ್ಫ್ ಕೊಹೆನ್

D. ಕ್ಲಿಯಾಂತ್ ಬ್ರೂಕ್ಸ್

ಇವುಗಳಲ್ಲಿ ಸರಿಯಾದ ಉತ್ತರ :

(1) B ಮತ್ತು D (2) A ಮತ್ತು C

(3) C ಮತ್ತು D (4) D ಮತ್ತು A



www.examrace.com

**27.** ಇವು ಕನ್ನಡದ ಆಕೃತಿಮಾಗಳು :

(a) ನೀರು, ಹಾಲು

(b) ಕಾರು, ಗಾಡಿ

(c) ಕಿವಿಗಳು, ರಾತ್ರಿಗಳು

(d) ಮನೆ, ಹುಲಿ

ಇವುಗಳಲ್ಲಿ ಸರಿಯಾದ ಉತ್ತರ :

(1) (a) ಮತ್ತು (b) (2) (c) ಮತ್ತು (d)

(3) (a) ಮತ್ತು (d) (4) (b) ಮತ್ತು (c)

**28.** ಇವು ವಿಧ್ಯರ್ಥಕ ಕ್ರಿಯಾಪದಗಳು :

(a) ನೀನು ಕಂಡದ್ದನ್ನು ಕಂಡ ಹಾಗೆ ಹೇಳು

(b) ಸನ್ಮಾರ್ಗದಲ್ಲಿ ನಡೆವಾತನು ಎಂದೆಂದಿಗೂ ಸೋಲನು

(c) ದೇವರು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ

(d) ಚೆನ್ನಾಗಿ ದುಡಿದವನು ಬದುಕಲ್ಲಿ ಯಶಸ್ಸನ್ನು ಪಡೆದಾನು

ಇವುಗಳಲ್ಲಿ ಸರಿಯಾದ ಉತ್ತರ :

(1) (a) ಮತ್ತು (c) (2) (b) ಮತ್ತು (d)

(3) (a) ಮತ್ತು (b) (4) (b) ಮತ್ತು (c)

**29.** ರಾಚನಿಕವಾದವು ರೂಪಿಸಿದ ಸಾಹಿತ್ಯ ವಿಮರ್ಶೆಯ ವಿಧಾನ :

(a) ಮಾರ್ಕ್ಸ್‌ವಾದಿ ವಿಮರ್ಶೆ

(b) ರೂಪನಿಷ್ಟ ವಿಮರ್ಶೆ

(c) ಸ್ತ್ರೀವಾದಿ ವಿಮರ್ಶೆ

(d) ಇಂಟ್ರಿನ್‌ಸಿಕ್ ವಿಮರ್ಶೆ

ಇವುಗಳಲ್ಲಿ ಸರಿಯಾದ ಉತ್ತರ :

(1) (a) ಮತ್ತು (c) (2) (b) ಮತ್ತು (c)

(3) (b) ಮತ್ತು (d) (4) (c) ಮತ್ತು (d)

**30.** ಧ್ವನಿ ತತ್ವವನ್ನು ಕುರಿತು ಚಿಂತಿಸಿದವರು :

(a) ಲೊಲ್ಲಟ

(b) ಭಟ್ಟ ತೌತ

(c) ಆನಂದವರ್ಧನ

(d) ವಾಮನ

ಇವುಗಳಲ್ಲಿ ಸರಿಯಾದ ಉತ್ತರ :

(1) (a) ಮತ್ತು (b) (2) (b) ಮತ್ತು (c)

(3) (c) ಮತ್ತು (d) (4) (a) ಮತ್ತು (d)



www.examrace.com

**ಕಾವ್ಯಭಾಗ ಆಧಾರಿತ ಬಹು ಆಯ್ಕೆಯ ಮಾದರಿ :**

ಈ ಕೆಳಗಿನ ಕಾವ್ಯಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ.

'ಈ ತೆಱನೊಳ್' ರಕ್ಕಸನ ಹರಿಸಂ ತರಿಸಮಾಗೆ ತಱಸಂದು ಮನದೆ
ಮಾಯೆಯಂ ಬಗೆದು ಕವಡುಬಿಜ್ಜೆಯನೊಡ್ಡಿ ನಿಲ್ವುದುಂ, ಪುಷ್ಕಲಂ
ನಾರಾಯಣಾಸ್ತ್ರಮಂ ಸೆಳೆದಿಸುವುದುಂ ಮಾಯಂ ಕಣ್ಮಾಯಮಾದತ್ತು.
ಆಗಳ್ ರಕ್ಕಸಂ ಬಕ್ಕಂಬಯಲೊಳಾಗೆ ಅಣುವನ ಗುರ್ದೊಂದು ಜನಕಜನ
ಗಜೆಯ ಬಡಿಯೆರಡು ಪ್ರತಾಪಾಗ್ರ್ಯನ ಬಾಳ ಕಡಿತಂ ಮೂಱು ಭಾರತಿಯ
ಬಿಱುಗಣೆಯ ಪೊಯ್ ನಾಲ್ಕು ಮಿಕ್ಕ ರಾಯರ ಇಟ್ಟಿಯ ಕೊಂತದಿಱಿತ
ವೈದು ಇವಱಿನೈದಱಿಂ ರಕ್ಕಸಂ ಪಂಚತ್ವಮನೆಯ್ದಿದಂ. ಸುರದುಂದುಭಿ
ನಿನಾದಂ ದಿಗ್ಗಜಂಗಳ ಬೃಂಹಿತಂ ಸಪ್ತಶರಧಿ ನಿರ್ಘೋಷಂ ಮೂವಡಿಯಿಂ
ಪೆರ್ಚಿದುದು. ಸುರರುಂ ಕಿನ್ನರರುಂ ನರರುಂ ವಾನರರುಂ ಪೊಗರೇಱಿ
ಕಳೆವೆರ್ಚಿದರ್.
ಎನ್ನರೆವೊಡಲ ಮುದ್ದುಮೊಗದ ಸಿಂಗಾರಿ ! ಎನ್ನ ಪೊನ್ನ ಪದಗದ
ರನ್ನದಾರದ ಬಚ್ಚಳೆ, ನೀಱೆ ! ಇಂತಿನಿತೊಂದು ಮಾಟ್ಕೆಯಿಂ ಮಡಿದಾಂ
ಗೊಟಗೆಂತಂತು ಪೋಟ್ದಿರ್ಕಡಿವೋಗಿ ರಣದೊಳ್ ಕೆಡೆದ ದಾನವನೊಡಲಂ
ಕಾಗೆಗೂಗೆಗಳ್ ನರಿನಾಯ್ಗಳಾರಯ್ಯುತಿರ್ಪುದುಮಿತ್ತಲ್ ಹತಶೇಷರಪ್ಪ
ರಕ್ಕಸರ್ ರಣಕೆ ಬೆಂಗೊಟ್ಟೋಡಿ ತಮ್ಮೆಡೆಯಂ ಪೊರ್ದಿದರ್.
ಮತ್ತಮಾಗಳ್ ತಮ್ಮನೆ ಒಲ್ದೊಱಲ್ದು ಬೆಂಬಿಡಿದೆಯ್ದಿವರ್ಪ ವಿಜಯ
ಶ್ರೀಯಂ ತಱ್ಕೈಸಿ ನೋಡಿ ಕೂಡಿ ಹಯಂಬೆರಸು ಜೋದರೆಲ್ಲರ್ ಶತ್ರುಹ
ನೊಂದಾಣತಿಯೊಳನುವಱಿತು ಬಡಗದೆಸೆವಿಡಿದು ನಡೆಯುತುಮಿರ್ದರ್
ಆ ಕಾಲದೊಳ್ –
ಗೊಜ್ಜಿಗೆಗೆಳಜವ್ವನಂ ಮಲ್ಲಿಗೆಗೆ ಮೊಳೆಜವ್ವನಂ ಸುರಯಿಗೆ ನೆರೆ
ಜವ್ವನಂ ಪಡ್ಡಳಿಗೆ ತುಂಬುಜವ್ವನಂ ಕೋವಳೆಗೆ ಮೀಂಟುಜವ್ವನಂ ತಾವರೆಗೆ
[ಏಱುಂ] ಜವ್ವನಮೊದವಿದತ್ತು. ಮತ್ತಂ ಗೋಣಿಗೆ ಪಣ್ಣಂ ಮಾಮರಕ್ಕೆ
ಪೂವಂ ಬಕ್ಕೆವಲಸಿಂಗೆ ಕಳಿಕೆಯಂ ತೆಂಗು ಕೌಂಗುಗಳ್ಗೆ ನಿಡುಗೊನೆಯಂ
ಪತ್ತಿಸಿ ತೆತ್ತಿಸಿ ಬೀಸುವ ಪಡುವಲ ಗಾಳಿ ಕಳಿತು ಚಳಿತು ಬೆಂಗುಡುವಿನೆಗಂ
ನುರ್ಗಿ ತಳ್ಪೊಯ್ದು ಪಳಂಚಲೆದುದು.

**31.** ಮಾಯೆಯು ಮಾಯವಾದುದು ಹೇಗೆ ?

(1) ಪುಷ್ಕಲನ ಮಂತ್ರದ ಪ್ರಭಾವದಿಂದ
(2) ನಾರಾಯಣ ಅಸ್ತ್ರದ ಪ್ರಯೋಗದಿಂದ
(3) ರಾಕ್ಷಸನ ಚಾತುರ್ಯದಿಂದ
(4) ಗದಾ ಪ್ರಹಾರದಿಂದ

**32.** ದೇವದುಂದುಭಿಯ ನಿನಾದವಾದುದೇಕೆ ?

(1) ಸುರರ ಕಾಂತಿ ಅಧಿಕವಾದುದರಿಂದ
(2) ವಾನರರ ಕಾಂತಿ ಅಧಿಕವಾದುದರಿಂದ
(3) ರಾಕ್ಷಸನ ಮರಣದಿಂದ
(4) ಹನುಮಾನ ಗುದ್ದಿನಿಂದ



www.examrace.com

33. ‘ನನ್ನ ಮುದ್ದು ಮೊಗದ ಸಿಂಗಾರಿ’ ಎಂದು ಯಾರನ್ನು ಕರೆಯಲಾಗಿದೆ ?

(1) ರಾಕ್ಷಸನ ಹೆಣವನ್ನು
(2) ದೇವತಾ ಸ್ತ್ರೀಯನ್ನು
(3) ಪ್ರೀತಿಸಿದ ಮಡದಿಯನ್ನು
(4) ಸೇವಕಿಯನ್ನು

34. ‘ಎಳಜವ್ವನ’ ಈ ಕೆಳಗಿನ ಸಮಾಸಕ್ಕೆ ಉದಾಹರಣೆ :

(1) ಬಹುವ್ರೀಹಿ
(2) ತತ್ಪುರುಷ
(3) ದ್ವಂದ್ವ
(4) ಕರ್ಮಧಾರಯ

35. ‘ಪಳಂಚಲೆದುದು’ ಎಂದರೆ :

(1) ಸಮೀಪಿಸಿತು
(2) ನುಗ್ಗಿತು
(3) ಹೊಡೆಯಿತು
(4) ತಾಗಿತು

**ಹೇಳಿಕೆ – ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

36. ಹೇಳಿಕೆ : ‘ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ.’
ವಿವರಣೆ : ಸ್ವಾರಸ್ಯಕರವಾಗಿ ಮಾತನಾಡುವವನಿಂದ ಮನಸ್ಸಿಗೆ ಆಹ್ಲಾದ ಉಂಟಾಗುತ್ತದೆ.

(1) ಹೇಳಿಕೆ ತಪ್ಪು, ವಿವರಣೆ ಸರಿ
(2) ಹೇಳಿಕೆ ತಪ್ಪು, ವಿವರಣೆ ತಪ್ಪು
(3) ಹೇಳಿಕೆ ಸರಿ, ವಿವರಣೆ ಸರಿ
(4) ಹೇಳಿಕೆ ಸರಿ, ವಿವರಣೆ ತಪ್ಪು

37. ಹೇಳಿಕೆ : ‘ಚೇತನ ಮೂರ್ತಿಯು ಆ ಕಲ್ಲು
ತೆಗೆ ! ಜಡವೆಂಬುದೆ ಬರಿ ಸುಳ್ಳು !
ವಿವರಣೆ : ಜಗತ್ತಿನ ಚೇತನವಾದವನ್ನು ಸ್ಪಷ್ಟವಾಗಿ ಒಪ್ಪಿಕೊಂಡ ಭಾವವು ಇಲ್ಲಿ ಕಾಣುತ್ತದೆ.

(1) ಹೇಳಿಕೆ ಸರಿ, ವಿವರಣೆ ತಪ್ಪು
(2) ಹೇಳಿಕೆ ಸರಿ, ವಿವರಣೆ ಸರಿ
(3) ಹೇಳಿಕೆ ತಪ್ಪು, ವಿವರಣೆ ತಪ್ಪು
(4) ಹೇಳಿಕೆ ತಪ್ಪು, ವಿವರಣೆ ಸರಿ

38. ಹೇಳಿಕೆ : ‘ಲಿಂಗಂ ನಿಯತ ಚತುರ್ಭೇದಂ,
ಅದಾರಯೆ ಕೃತ್ತದ್ಧಿತಸಮಾಸ ನಾಮ ಸ್ಥಿತಿಯಿಂ’
ವಿವರಣೆ : ಲಿಂಗವು ನಾಲ್ಕು ತೆರನಾಗಿದೆ. ಅವುಗಳೆ
ಕೃತ್, ತದ್ಧಿತ, ಸಮಾಸ ಮತ್ತು ನಾಮ.

(1) ಹೇಳಿಕೆ ಸರಿ, ವಿವರಣೆ ತಪ್ಪು
(2) ಹೇಳಿಕೆ ತಪ್ಪು, ವಿವರಣೆ ತಪ್ಪು
(3) ಹೇಳಿಕೆ ತಪ್ಪು, ವಿವರಣೆ ಸರಿ
(4) ಹೇಳಿಕೆ ಸರಿ, ವಿವರಣೆ ಸರಿ



www.examrace.com

39. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುವುದಿಲ್ಲ ?

(1) ಪ್ಲೇಟೋ — ನೆಮಿಸಿಸ್

(2) ಲಾಂಗಿನಸ್ — ಸಬ್ಲೈಮ್

(3) ಕ್ರೋಚೆ — ಕೆಥಾರಿಸಿಸ್

(4) ಮ್ಯಾಥ್ಯೂ ಆರ್ನಾಲ್ಡ್ — ಕಲ್ಚರ್ ಅಂಡ್ ಅನಾರ್ಕಿ

40. ಇವುಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ಸ್ಯಾಮುಯೆಲ್ ಬೆಕೆಟ್ — ಅಸಂಗತವಾದ

(2) ಸಾರ್ತ್ರ — ಅಸ್ತಿತ್ವವಾದ

(3) ಸ್ಟೀಫನ್ ಸ್ಪೆಂಡರ್ — ಮಾರ್ಕ್ಸ್‌ವಾದ

(4) ವರ್ಡ್ಸ್‌ವರ್ತ್ — ರೊಮ್ಯಾಂಟಿಸಿಸಂ

41. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ ?

(1) ಹೂ, ಹಣ್ಣು — ಅಮಹತ್

(2) ಅಣ್ಣ, ತಮ್ಮ — ಮಹತ್

(3) ಸಪ್ತಮೀ ವಿಭಕ್ತಿ — ಅಧಿಕರಣ

(4) ತೃತೀಯಾ ವಿಭಕ್ತಿ — ಸಂಪ್ರದಾನ

42. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(1) ಕರ್ನಾಟಕ ಕಾದಂಬರಿ — ಬಾಣ

(2) ಕರ್ಣಾಟ ಭಾರತ ಕಥಾ ಮಂಜರಿ — ವ್ಯಾಸ

(3) ಕವಿರಾಜಮಾರ್ಗ — ದಂಡಿ

(4) ರಾಮಚಂದ್ರ ಚರಿತ ಪುರಾಣ — ಜಿನಸೇನಾಚಾರ್ಯ

43. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ ?

(1) ಪ್ರಸಾದ — ಅರ್ಥದೋಷ

(2) ದೀಪಕ — ಅರ್ಥಾಲಂಕಾರ

(3) ಲಜ್ಜೆ — ಸ್ಥಾಯಿಭಾವ

(4) ಜುಗುಪ್ಸೆ — ಸಂಚಾರಿಭಾವ



www.examrace.com

ಬಹು ಆಯ್ಕೆಯ ಜೋಡಣೆಯ ಮಾದರಿ :

**44.** A. ಕವಿರಾಜಮಾರ್ಗ i. ಬಗೆ ಪೊಸತಪ್ಪುದಾಗಿ ಮೃದು ಬಂದದೊಳೊಂದುವುದು

B. ಚಾಮರಸ ii. ಧ್ವನಿಯೆಂಬುದಲಂಕಾರಂ ಧ್ವನಿಯಿಸುಗುಮಂ ಶಬ್ದದಿಂದರ್ಥದೆ ದೂಷ್ಯಂ

C. ಪಂಪ ಭಾರತ iii. ಸೆಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ ರಂಜನೆಯಲ್ಲದೆ ಅದರ ಗಂಜಲ ಬಿಡದಣ್ಣ

D. ಬಸವಣ್ಣ iv. ತೋರ ಮಾಣಿಕವೆಂದು ಪಿಡಿದರೆ ಭೂರಿ ಕೆಂಡವಿದಾಯ್ತು

v. ಸಿಡಿಲುವಕ್ಕಿಯ ಪಕ್ಕವನು ಕಿತ್ತಡಬಳದ ಬಾಣಸವ ಮಾಡುವ ಕಲಿಗಳಾರುಂಟು

ಇವುಗಳಲ್ಲಿ ಸರಿಯಾದ ಉತ್ತರ :

| | A | B | C | D |
|---|---|---|---|---|
| (1) | iii | iv | ii | v |
| (2) | ii | v | i | iii |
| (3) | v | iii | ii | iv |
| (4) | ii | v | iii | i |

**45.** (a) ಆದಾನ, ಪ್ರದಾನ (i) ಫಾರಸಿ ಸ್ವೀಕರಣ

(b) ಅರಿಲ್, ನೇಸರು (ii) ಮರಾಠಿ ಸ್ವೀಕರಣ

(c) ಕಾರಕೂನ, ವಕೀಲ (iii) ಪೋರ್ಚುಗೀಸ್ ಸ್ವೀಕರಣ

(d) ಖರೆ, ಪುಢಾರಿ (iv) ಸಂಸ್ಕೃತ ಸ್ವೀಕರಣ

(v) ಕನ್ನಡ ದೇಶ್ಯ ಶಬ್ದಗಳು

ಇವುಗಳಿಗೆ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (v) | (iii) | (ii) | (i) |
| (2) | (iii) | (i) | (v) | (iv) |
| (3) | (iv) | (v) | (i) | (ii) |
| (4) | (i) | (ii) | (iv) | (iii) |

**46.** (a) ಟಿ.ಎಸ್. ಎಲಿಯಟ್ (i) ನಾಟಕದ ದೇಸಿಯತೆ

(b) ಅರಿಸ್ಟಾಟಲ್ (ii) ಭವ್ಯತೆ

(c) ಕೋಲ್‌ರಿಜ್ (iii) ಪರಂಪರೆ ಮತ್ತು ವ್ಯಕ್ತಿ ಪ್ರತಿಭೆ

(d) ಡ್ರೈಡನ್ (iv) ಕಾವ್ಯ ಮೀಮಾಂಸೆ

(v) ಕಲ್ಪನೆ

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (iii) | (iv) | (v) | (i) |
| (2) | (iv) | (ii) | (iii) | (v) |
| (3) | (iii) | (ii) | (i) | (v) |
| (4) | (v) | (iv) | (iii) | (i) |



www.examrace.com

**47.** (a) ಬಸವರಾಜ ಕಟ್ಟೀಮನಿ (i) ಚುಟುಕು ಬ್ರಹ್ಮ

(b) ಶಿಶುನಾಳ ಶರೀಫ (ii) ಕನ್ನಡದ ದಾಸಯ್ಯ

(c) ಶಾಂತ ಕವಿ (iii) ಕನ್ನಡದ ಕಬೀರ

(d) ದಿನಕರ ದೇಸಾಯಿ (iv) ಕುಂದರನಾಡಿನ ಕಂದ

(v) ಪ್ರೇಮ ಕವಿ

ಇವುಗಳಿಗೆ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (1) | (iv) | (iii) | (ii) | (i) |
| (2) | (iv) | (iii) | (v) | (i) |
| (3) | (ii) | (iv) | (v) | (i) |
| (4) | (i) | (ii) | (iv) | (iii) |

**ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.**

**48.** (1) ಚೆನ್ನಬಸವ, ಭೀಮಕವಿ, ಕೇಶಿರಾಜ, ನೇಮಿಚಂದ್ರ

(2) ನೇಮಿಚಂದ್ರ, ಕೇಶಿರಾಜ, ಭೀಮಕವಿ, ಚೆನ್ನಬಸವ

(3) ಚೆನ್ನಬಸವ, ನೇಮಿಚಂದ್ರ, ಕೇಶಿರಾಜ, ಭೀಮಕವಿ

(4) ಕೇಶಿರಾಜ, ಚೆನ್ನಬಸವ, ನೇಮಿಚಂದ್ರ, ಭೀಮಕವಿ

**49.** (1) ಕನ್ನಡ ಭಾಷಾ ಶಾಸ್ತ್ರ, ಭಾಷಾ ವಿಜ್ಞಾನದ ಮೂಲ ತತ್ವಗಳು, ಕನ್ನಡ ಕೈಪಿಡಿ, ಹಿಸ್ಟರಿ ಆಫ್ ಕನ್ನಡ ಲಾಂಗ್ವೇಜ್.

(2) ಕನ್ನಡ ಕೈಪಿಡಿ, ಹಿಸ್ಟರಿ ಆಫ್ ಕನ್ನಡ ಲಾಂಗ್ವೇಜ್, ಭಾಷಾ ವಿಜ್ಞಾನದ ಮೂಲ ತತ್ವಗಳು, ಕನ್ನಡ ಭಾಷಾ ಶಾಸ್ತ್ರ.

(3) ಹಿಸ್ಟರಿ ಆಫ್ ಕನ್ನಡ ಲಾಂಗ್ವೇಜ್, ಕನ್ನಡ ಕೈಪಿಡಿ, ಕನ್ನಡ ಭಾಷಾ ಶಾಸ್ತ್ರ, ಭಾಷಾ ವಿಜ್ಞಾನದ ಮೂಲ ತತ್ವಗಳು.

(4) ಭಾಷಾ ವಿಜ್ಞಾನದ ಮೂಲ ತತ್ವಗಳು, ಕನ್ನಡ ಭಾಷಾ ಶಾಸ್ತ್ರ, ಹಿಸ್ಟರಿ ಆಫ್ ಕನ್ನಡ ಲಾಂಗ್ವೇಜ್, ಕನ್ನಡ ಕೈಪಿಡಿ.

**50.** (1) ಎಜ್ರಾ ಪೌಂಡ್, ಮ್ಯಾಥ್ಯೂ ಆರ್ನಾಲ್ಡ್, ಎಫ್.ಆರ್. ಲಿವೀಸ್, ಎಡ್ವರ್ಡ್ ಸೈರ್.

(2) ಮ್ಯಾಥ್ಯೂ ಆರ್ನಾಲ್ಡ್, ಎಜ್ರಾ ಪೌಂಡ್, ಎಫ್.ಆರ್. ಲಿವೀಸ್, ಎಡ್ವರ್ಡ್ ಸೈರ್.

(3) ಎಫ್.ಆರ್. ಲಿವೀಸ್, ಮ್ಯಾಥ್ಯೂ ಆರ್ನಾಲ್ಡ್, ಎಡ್ವರ್ಡ್ ಸೈರ್, ಎಜ್ರಾ ಪೌಂಡ್.

(4) ಎಡ್ವರ್ಡ್ ಸೈರ್, ಎಜ್ರಾ ಪೌಂಡ್, ಎಫ್.ಆರ್. ಲಿವೀಸ್, ಮ್ಯಾಥ್ಯೂ ಆರ್ನಾಲ್ಡ್.



www.examrace.com

**Space For Rough Work**

ExamRace



www.examrace.com